<u>ದಿನಾಂಕ **23.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

ಈ ದಿನ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರಪಡಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿದ್ದು, ಅದು ನಿಜವಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

<u>ಮುಂದುವರೆದ ಮುಖ್ಯ ವಿಚಾರಣೆಃ- **2**ನೇ ಎದುರುದಾರರ ಪರ ಶ್ರೀಮತಿ ಎಸ್ ಎ ಎನ್ ವಕೀಲರಿಂದಃ-</u>

1. ಆಥರಾಯಿಜೇಶನ್ ಲೆಟರ್ ಹಾಜರುಪಡಿಸಿದ್ದು ಅದನ್ನು ನಿಆರ್-3 ಎಂದು ಗುರುತಿಸಲಾಯಿತು.

2. ವಿಮಾ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್-4 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಎ ಎಂ ಎಂ ವಕೀಲರಿಂದಃ-</u>

1. ಅಪಘಾತವಾದ ದಿನಾಂಕದಂದು ವಾಹನ ನೋಂದಣಿ ಸಂಖ್ಯೆಃ ಕೆಎ-25/ಎಬಿ-6116 ಇದರ ವಿಮಾ ಚಾಲ್ತಿಯಲ್ಲಿತ್ತು ಎಂದರೆ ಸರಿ. ನಾನು ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ಟ್ರಕ್ ನೋಂದಣಿ ಸಂಖ್ಯೆಃ ಕೆಎ-25/ಎಬಿ-6116 ಚಲಿಸುತ್ತಿದ್ದಾಗ, ಅರ್ಜಿದಾರರ ಮೋಟಾರ್ ಸೈಕಲ್ ನೋಂದಣಿ ಸಂಖ್ಯೆಃ ಕೆಎ-48/ವೈ-5454 ವಾಹನವನ್ನು ಅಜಾಗರೂಕತೆಯಿಂದ ಮತ್ತು ನಿರ್ಲಕ್ಷತನದಿಂದ ಚಲಾಯಿಸಿ ಅಪಘಾತಪಡಿಸಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಅರ್ಜಿದಾರನ ತಪ್ಪಿನಿಂದ ಆಗದೇ ಇದ್ದರೂ ಸಹಿತ ಮತ್ತು ಪರಿಹಾರ ನೀಡುವ ಭಾಧ್ಯತೆಯಿಂದ ತಪ್ಪಿಸಿಕೊಳ್ಳಲು, ನಾನು ಆತನ ವಿರುದ್ಧ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **3**ನೇ ಎದುರುದಾರರ ಪರ ಶ್ರೀ.ಆರ್ ಜಿ ಟಿ ವಕೀಲರಿಂದಃ-</u>

2. ಅಪಘಾತವಾಗುವ ಸಮಯದಲ್ಲಿ ವಾಹನ ನೋಂದಣಿ ಸಂಖ್ಯೆಃ ಕೆಎ-25/ಎಬಿ-6116 ಚಲಿಸುತ್ತಿತ್ತು. ಸಿಸಿ ನಂ.21/2023 ರಲ್ಲಿ ವಾಹನ ನೋಂದಣಿ ಸಂಖ್ಯೆಃ ಕೆಎ-25/ಎಬಿ-6116 ರ ಚಾಲಕ ತನ್ನ ಅಪರಾಧ ಒಪ್ಪಿಕೊಂಡು ದಂಡ ಪಾವತಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಹನದ ಚಾಲಕ ಯಾವುದೇ ಸೂಚನೆಗಳನ್ನು ನೀಡದೇ ರಸ್ತೆ ಮೇಲೆ ತನ್ನ ವಾಹನವನ್ನು ನಿಲ್ಲಿಸಿದ್ದ ಎಂದರೆ ಸರಿಯಲ್ಲ. 2ನೇ ಎದುರುದಾರರನ್ನು ಪರಿಹಾರ ನೀಡುವ ಭಾಧ್ಯತೆಯಿಂದ

ತಪ್ಪಿಸಲು, ನಾನು 3ನೇ ಎದುರುದಾರರು ಪರಿಹಾರ ನೀಡಲು ಭಾಧ್ಯಸ್ಥರಾಗಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

RAJASHEKHAR
Digitally signed by RAJASHEKHAR
Date: 2025.10.24 14:51:06 +0530

ಸದಸ್ಯರು ಮೋ.ವಾ.ಅ. ಮಂಡಳಿ-5,
ಜಮಖಂಡಿ.